# ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಎ)
# ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ ಕಲಾ ನಿರ್ಮಿತಿಗಳಿಗೆ (ಪ್ರೊಡಕ್ಷನ್ಸ್) ಅರ್ಜಿಗಳನ್ನು ಆಹ್ವಾನಿಸುತ್ತದೆ

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: Friday, June 09, 2023**

ಕಲಾ ಅಭ್ಯಾಸ ಕಾರ್ಯಕ್ರಮದ ಉದ್ದೇಶ, ಕಲಾವಿದರು ತಮ್ಮ ಪ್ರಸ್ತುತ ಅಭ್ಯಾಸವನ್ನು ಹೊಸ ದಿಕ್ಕಿನಲ್ಲಿ ವಿಸ್ತರಿಸಲು ಸಹಕಾರಿಯಾದ ಯೋಜನೆಗಳನ್ನು ಕೈಗೊಳ್ಳುವುದು. ಇವುಗಳು ಪ್ರಯೋಗಶೀಲವಾಗಿದ್ದು, ಈಗಾಗಲೇ ಒಪ್ಪಿತವಾದ ರೂಢಿಗಳನ್ನು ಪ್ರಶ್ನಿಸುವಂಥದ್ದಾಗಿರಬಹುದು, ತಮ್ಮ ಕಲಾ ಪ್ರಕಾರದಲ್ಲಿ ವಸ್ತು, ರೂಪ, ಮಾಧ್ಯಮಗಳ ಹೊಸ ಸಾಧ್ಯತೆಗಳನ್ನು ಹುಡುಕುವಂಥದ್ದಾಗಿರಬಹುದು, ರಂಗಸ್ಥಳ, ಶ್ರೋತೃಗಳು/ ವೀಕ್ಷಕರು, ಅಥವಾ ಸಮುದಾಯದ ಜೊತೆಗೆ ಹೊಸ ರೀತಿಯ ಪಾಲ್ಗೊಳ್ಳುವಿಕೆಯನ್ನು ಹುಡುಕುವಂಥದ್ದಾಗಿರಬಹುದು.

**ಕಲಾ ನಿರ್ಮಾಣಗಳು:**

ಕಲಾವಿದರು ತಮ್ಮ ಕಲಾ ಪಯಣದಲ್ಲಿ ಯಾವುದೋ ಒಂದು ಘಟ್ಟದಲ್ಲಿ, ತಾವು ಪರಂಪರೆಯಲ್ಲಿ ಪಡೆದ ಚೌಕಟ್ಟನ್ನು ಪ್ರಶ್ನಿಸುವ ಹಾಗೂ/ಅಥವಾ ಕಲಾ ಸೃಷ್ಟಿಯಲ್ಲಿ ಹಾಗೆಯೇ ಅದರ ಪ್ರಸ್ತುತಿಯಲ್ಲಿ ಹೊಸ ಸಾಧ್ಯತೆಗಳನ್ನು ಹುಡುಕುವ ಮೂಲಕ ತಮ್ಮ ಕಲಾ ಅಭ್ಯಾಸವನ್ನು ಪುನರ್ವೀಕ್ಷಣೆ/ ಪುನರ್ಕಲ್ಪನೆ ಮಾಡಬಯಸಬಹುದು. ಅಂತಹ ಹುಡುಕಾಟ ಶೋಧನಾತ್ಮಕ ಹಾಗೂ ಪ್ರಯೋಗಶೀಲವಾಗಿರುವ ಕಲಾ ನಿರ್ಮಾಣವಾಗಿ ಪರಿಣಮಿಸಬಹುದು.

ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ, ಈ ರೀತಿಯ ಹುಡುಕಾಟದ ಫಲಿತಾಂಶವಾಗಿ ರೂಪುಗೊಳ್ಳುವ ಕಲಾ ನಿರ್ಮಾಣಗಳಿಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತೇವೆ. ಇವು ಪ್ರದರ್ಶನಾತ್ಮಕ, ಶ್ರಾವ್ಯ, ದೃಶ್ಯ, ಡಿಜಿಟಲ್, ಸಾಹಿತ್ಯಿಕ ಅಥವಾ ಈ ಪ್ರಕಾರಗಳನ್ನು ಒಳಗೊಂಡ ಅಂತರ್ಶಿಸ್ತೀಯ ಕಲಾ ನಿರ್ಮಾಣಗಳಾಗಿರಬಹುದು. ನಾಟಕ, ನೃತ್ಯ, ಸಂಗೀತ ಪ್ರದರ್ಶನಗಳು, ಇನ್ಸ್ಟಲೇಶನ್ಸ್, ಪ್ರದರ್ಶನಗಳು, ಪುಸ್ತಕಗಳು, ಮ್ಯಾಗಜಿನ್ ಮತ್ತಿತರ ಪ್ರಕಟಣೆಗಳು, ಸಿನೆಮಾ ಹಾಗೂ ಚಲನ ಚಿತ್ರ ಪ್ರಸ್ತುತಿಗಳು, ಆಟಗಳು (ಗೇಮ್ಸ್), ಇಂಟರ್ಫೇಸ್ ಹಾಗೂ ಇನ್ನಿತರ ಡಿಜಿಟಲ್ ಕಲಾಕೃತಿಗಳು ಅಥವಾ ಇನ್ನಾವುದೇ ಇಲ್ಲಿಯವರೆಗೆ ಕಲ್ಪಿಸದ ಪ್ರಕಾರಗಳ ಕಲಾ ನಿರ್ಮಾನಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸಬಹುದು.

**ಯೋಜನೆಯ ಅವಧಿ: ಗರಿಷ್ಠ 18 ತಿಂಗಳುಗಳು**

**ಅನುದಾನ ಮಿತಿ**: **ಗರಿಷ್ಠ ರೂ 5,00,000/–**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ**: **Friday, June 09, 2023**

**ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು?**

ಈ ಕಾರ್ಯಕ್ರಮದಡಿಯಲ್ಲಿ ನಿರ್ದಿಷ್ಟ ಕಲಾಪ್ರಕಾರವೊಂದರಲ್ಲಿ ಅಥವಾ ಅಂತರ್ಶಿಸ್ತೀಯವಾಗಿ ಕೆಲಸ ಮಾಡುತ್ತಿರುವ ಕಲಾವಿದರು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

- ಸಂಗೀತ, ಶಬ್ದ, ಪಠ್ಯ, ನೃತ್ಯ, ಚಲನೆ, ನಾಟಕ, ಗೊಂಬೆಯಾಟ, ಕಥೆ ಹೇಳುವುದು, ಇಂದ್ರಜಾಲ, ಸರ್ಕಸ್ ಹಾಗೂ ಇನ್ನಿತರ ಪ್ರದರ್ಶನ ಕಲೆಗಳಲ್ಲಿ ತೊಡಗಿಕೊಂಡ ಕಲಾವಿದರಿರಬಹುದು.
- ಸಿನಿಮಾ (ಸಾಕ್ಷ್ಯಚಿತ್ರ ಹಾಗೂ ಕಲ್ಪನೆಯ ಆಧಾರಿತ), ಅನಿಮೇಶನ್, ಛಾಯಾಚಿತ್ರ, ಇನ್ಸ್ಟಲೇಶನ್, ಹೊಸ ಮೀಡಿಯಾ, ಕೃತಕ ಬುದ್ದಿವಂತಿಕೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ರೊಬೊಟಿಕ್ಸ್, ಸಂವಹನಾತ್ಮಕ ಕಲೆಗಳು, ಗೇಮಿಂಗ್, ಚಿತ್ರಕಲೆ, ಶಿಲ್ಪಕಲೆ, ಪ್ರಿಂಟ್ ತಯಾರಿಕೆ, ಕಾಮಿಕ್ ಪುಸ್ತಕ, ಗ್ರಾಫಿಕ್ ಕಥನ ಇನ್ನಿತರ ಕಲೆಗಳಲ್ಲಿ ತೊಡಗಿಕೊಂಡಿರುವ ದೃಶ್ಯ ಕಲಾವಿದರಿರಬಹುದು.
- ಕಲಾ ನಿರ್ವಾಹಕರು (ಕ್ಯುರೇಟರ್ಸ್) - ಅದರಲ್ಲೂ ಗ್ಯಾಲರಿಗಳ ಹೊರತಾಗಿ ಕೆಲಸ ಮಾಡುತ್ತಿರುವವರು.
- ಕವಿಗಳು, ಕಾದಂಬರಿಕಾರರು, ನಾಟಕಕಾರರು
- ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿಕೊಂಡಿರುವವರು

**ಪ್ರಸ್ತಾವನೆಯಲ್ಲಿ ಏನಿರಬೇಕು?**

- ನಿಮ್ಮ ಪ್ರಸ್ತುತ ಕಲಾ ಅಭ್ಯಾಸ, ಕಲಾವಿದರಾಗಿ ಕಾಳಜಿಗಳು ಹಾಗೂ ಆಸಕ್ತಿಗಳು
- ನೀವು ಉದ್ದೇಶಿಸಿರುವ ಕಲಾ ನಿರ್ಮಾಣದ ವಿವರಗಳು ಹಾಗೂ ಕಾರಣಗಳು
- ವಿಸ್ತೃತ ಸಮಯಸೂಚಿ ಹಾಗೂ ಆಯವ್ಯಯ ಪತ್ರ
- ನಿಮ್ಮ ಈ ಹಿಂದಿನ ಕೆಲಸದ ಉದಾಹರಣೆಗಳು
- ನೀಮ್ಮ ಬಯೋಡೇಟಾ , ಅಂಚೆ ವಿಳಾಸ, ಇಮೇಲ್ ವಿಳಾಸ ಹಾಗೂ ದೂರವಾಣಿ ಸಂಖ್ಯೆ

**ಪ್ರಸ್ತಾವನೆಯ ಸಲ್ಲಿಕೆ:**

- ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಬಹುದು. ಐಎಫ್ಎ ಇಂಗ್ಲಿಷ್ ಹೊರತಾಗಿ ಇತರ ಭಾರತೀಯ ಭಾಷೆಗಳ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ.
- ನಿಮ್ಮ ಪ್ರಸ್ತಾವನೆಯ ಕುರಿತು ಚರ್ಚಿಸಬೇಕಾದಲ್ಲಿ ಅಥವಾ ಪ್ರಸ್ತಾವನೆಯನ್ನು ಕುರಿತಂತೆ ಯಾವುದೇ ಪ್ರಶ್ನೆ/ಸಂದೇಹಗಳಿದ್ದಲ್ಲಿ, ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ **May 19** ರ ಒಳಗಾಗಿ ಸುಮನಾ ಚಂದ್ರಶೇಖರ್ ಅವರನ್ನು sumana@indiaifa.org ಮಿಂಚಂಚೆಯ ಮೂಲಕ ಸಂಪರ್ಕಿಸಿ.
- 25ಎಂಬಿ ಮೀರದ ಒಂದೇ ಮಿಂಚಂಚೆಯ ಮುಖಾಂತರ ಅಂತಿಮ ಯೋಜನಾ ಪ್ರಸ್ತಾವನೆಗಳನ್ನು sumana@indiaifa.org ಅವರಿಗೆ ಕಳುಹಿಸಲು ಕೊನೆಯ ದಿನಾಂಕ **Friday, June 09, 2023**

**ಆಯ್ಕೆಯ ಪ್ರಕ್ರಿಯೆ:**

ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ. ಆಯ್ಕೆಗೊಂಡ ಯೋಜನೆಗಳನ್ನು **September 2023** ರಲ್ಲಿ ಘೋಷಿಸಲಾಗುವುದು. ಈ ಬಗ್ಗೆ ಐಎಫ್ಎ ಯ ನಿರ್ಧಾರವೇ ಅಂತಿಮವಾಗಿರುತ್ತದೆ.

**ದಯವಿಟ್ಟು ಗಮನಿಸಿ, ಅಪೂರ್ಣ ಪ್ರಸ್ತಾವನೆಗಳು ಮತ್ತು ಅರ್ಹತಾ ಮಾನದಂಡಗಳ ಪಟ್ಟಿಯಲ್ಲಿ ಸೇರದ ಅರ್ಜಿದಾರರನ್ನು ಕಡೆಗಣಿಸಲಾಗುವುದು.**

ಆಯ್ಕೆಯಾದ ಎಲ್ಲಾ ಯೋಜನೆಗಳನ್ನು ಐ ಎಫ್ ಎ ಕಾರ್ಯಗತಗೊಳಿಸುತ್ತದೆ.

**ಕಲಾ ಅಭ್ಯಾಸ ಕಾರ್ಯಕ್ರಮಕ್ಕೆ ಸೋನಿ ಪಿಕ್ಚರ್ಸ್ ಎಂಟರ್ಟೈನ್ಮೆಂಟ್ ಫಂಡ್ ನ ಬೆಂಬಲವಿದೆ.**

## ಅರ್ಹತಾ ಮಾನದಂಡ

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್(ಐಎಫ್ಎ) ತನ್ನ ಹಲವಾರು ಕಾರ್ಯಕ್ರಮಗಳ ಅಡಿಯಲ್ಲಿ ಯೋಜನೆಗಳನ್ನು ಆರಂಭಿಸಿವೆ. ಈ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಲು ಅರ್ಹತಾ ಮಾನದಂಡಗಳು ಈ ಕೆಳಗಿನಂತಿವೆ:

- ಕೇವಲ ಭಾರತೀಯ ಪ್ರಜೆಗಳು ಮಾತ್ರ ಅರ್ಜಿ ಸಲ್ಲಿಸಬಹುದು. ಇದರಲ್ಲಿ ಪಿಐಒ(ಭಾರತೀಯ ಮೂಲದವರು) ಮತ್ತು ಒಸಿಐ(ಸಾಗರೋತ್ತರ ಭಾರತೀಯ ಪ್ರಜೆ) ಕಾರ್ಡ್ ಧಾರಕರು ಒಳಗೊಂಡಿಲ್ಲ.
- ಅರ್ಜಿದಾರರು ಪ್ಯಾನ್ ಕಾರ್ಡ್ ಅಥವಾ ಭಾರತೀಯ ಪಾಸ್ಪೋರ್ಟ್ ಅಥವಾ ಆಧಾರ್ ಕಾರ್ಡ್ ಅಥವಾ ಭಾರತದಲ್ಲಿನ ವೋಟರ್ ಐಡಿ ಕಾರ್ಡ್ ರೀತಿಯ ಯಾವುದೇ ಒಂದು ಗುರುತಿನ ಅಥವಾ ನಾಗರಿಕತೆಯ ಪುರಾವೆ ಹೊಂದಿರಬೇಕು.
- ಕೇವಲ ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಬಹುದು. ಯಾವುದೇ ರೀತಿಯ ಸಂಘಟನೆಗಳಿಗೆ ಅರ್ಜಿ ಸಲ್ಲಿಸುವ ಅನುಮತಿ ಇಲ್ಲ.
- ಒಂದುವೇಳೆ ಯೋಜನೆಗಳಲ್ಲಿ ಯಾವುದೇ ಸಹಭಾಗಿದಾರರು ಇದ್ದಲ್ಲಿ, ಅವರೂ ಸಹ ಭಾರತೀಯ ಪ್ರಜೆಯಾಗಿರಬೇಕು.
- ಐಎಫ್ಎ ಯೊಂದಿಗೆ ಈ ಹಿಂದೆ ಯಾವುದೇ ರೀತಿಯ ಹಣಕಾಸಿನ ವಿವಾದಗಳನ್ನು ಹೊಂದಿರುವ ವ್ಯಕ್ತಿಗಳು ಇದಕೆ ಅರ್ಹರಿರುವುದಿಲ್ಲ.
- ಐಎಫ್ಎ ರಲ್ಲಿ ಈ ಮೊದಲು ಐಎಫ್ಎ ಅನುಮೋದನೆಯಿಂದ ಒಪ್ಪಂದ ಮಾಡಿಕೊಂಡ ಡೆಲಿವರಿಗಳಲ್ಲಿ ವಿಫಲರಾಗಿರುವ ವ್ಯಕ್ತಿಗಳು ಇದಕ್ಕೆ ಅರ್ಹರಿರುವುದಿಲ್ಲ.
- ಐಎಫ್ಎ ಇಂದ ಈ ಮೊದಲೇ ಯಾವುದಾದರೂ ಕಾರಣಕ್ಕಾಗಿ ಭವಿಷ್ಯದಲ್ಲಿ ಅರ್ಜಿ ಸಲ್ಲಿಸಲು ಅನುಮತಿಯಿಲ್ಲ ಎಂದು ಅಧಿಕೃತ ಪತ್ರವನ್ನು ಪಡೆದಿರುವ ವ್ಯಕ್ತಿಗಳಿಗೆ ಅರ್ಹತೆ ಇರುವುದಿಲ್ಲ.
- ಜಂಟಿ ಖಾತೆಯಿದ್ದರೆ ಒಂದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದು. ಒಂದುವೇಳೆ ಇಲ್ಲವೆಂದರೆ, ಆಗ ಇತರರು ಸಹಭಾಗಿದಾರರಾಗಿ ಒಬ್ಬರು ಮಾತ್ರ ಅರ್ಜಿ ಸಲ್ಲಿಸಬಹುದು.